ನಡುಬಾಡೆ ಇ-ಪತ್ರಿಕೆ

ASDCA No;SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ಸಂಪುಟ:01 ಸಂಚಿಕೆ:46 ದಿನಾಂಕ: 16/11/26, ಶನಿವಾರ 8951073556 ನಾಳಂಕೆ : ಬಿರ್ಯಾರ್ - 01, ತಿಂಗಳಾಚೆ

www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews ಪುಟ:1

ರಾಜ್ಯ ಸರ್ಕಾರದ ವಿರುದ್ಧ ನ.20 ಮತ್ತು 23 ರಂದು ಕೊಡಗು ಬಿಜೆಪಿಯಿಂದ ಬೃಹತ್ ಪ್ರತಿಭಟನೆ...



@nadubadewarthe ಮಡಿಕೇರಿ, ನ.16: ರಾಜ್ಯ ಕಾಂಗ್ರೆಸ್ ಸರಕಾರದ ಜನವಿರೋಧಿ ಆಡಳಿತದ ವಿರುದ್ಧ ಕೊಡಗು ಜಿಲ್ಲಾ ಬಿಜೆಪಿ ವತಿಯಿಂದ ನವೆಂಬರ್ 20ರಂದು ವಿರಾಜಪೇಟೆಯಿಂದ ಮಡಿಕೇರಿಗೆ ಹಾಗೂ ನವೆಂಬರ್ 23ರಂದು ಬೆಟ್ಟದಳ್ಳಿಯಿಂದ ಸೋಮವಾರಪೇಟೆಯವರೆಗೆ ಪ್ರತಿಭಟನಾ ಜಾಥಾ ನಡೆಯಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ತಿಳಿಸಿದ್ದಾರೆ.

ಮಡಿಕೇರಿಯ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ಅಗತ್ಯ ವಸ್ತುಗಳ ಬೆಲೆ ನಿರಂತರವಾಗಿ ಏರಿಕೆಯಾಗಿದ್ದು, ಭ್ರಷ್ಟಾಚಾರ ಮಿತಿಮೀರಿದೆ. ಸರಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಕೊಡಗು ಜಿಲ್ಲೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದು ಆರೋಪಿಸಿದರು.

ಹಾಲಿನ ದರ ಏರಿಕೆಯ ಹೊರೆಯನ್ನು ಗ್ರಾಹಕರ ಮೇಲೆ ಹಾಕಲಾಗಿದೆ. ಶೇ.30ರಿಂದ 40ರಷ್ಟು ಬಸ್ ಪ್ರಯಾಣ ದರ ಏರಿಕೆಯಿಂದ ಜನಸಾಮಾನ್ಯರಿಗೆ ತೊಂದರೆಯಾಗಿದೆ. ಕೊಡಗು ಜಿಲ್ಲೆಯ ರಸ್ತೆಗಳು ಹದಗೆಟ್ಟಿದ್ದು, ಕಳೆದ ಮೂರು ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆದಿಲ್ಲ ಎಂದು ದೂರಿದರು.ಸಿ ಮತ್ತು ಡಿ ಭೂಮಿ ಸಮಸ್ಯೆ ಹಾಗೂ ವನ್ಯಜೀವಿಗಳ ದಾಳಿ ಸೇರಿದಂತೆ ಜಿಲ್ಲೆಯ ಪ್ರಮುಖ ಸಮಸ್ಯೆಗಳಿಗೆ ಸರಕಾರ ಸ್ಪಂದಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ನ.20ರಂದು ವಿರಾಜಪೇಟೆಯಿಂದ ಮಡಿಕೇರಿವರೆಗೆ ಪ್ರತಿಭಟನಾ ಜಾಥಾ ಹಮ್ಮಿಕೊಳ್ಳಲಾಗಿದೆ. ಮಾರ್ಗಮಧ್ಯೆ ವಿವಿಧೆಡೆ ಜನಜಾಗೃತಿ ಸಭೆಗಳನ್ನು ನಡೆಸಿ, ಮಡಿಕೇರಿಯ ಖಾಸಗಿ ಬಸ್ ನಿಲ್ದಾಣದಲ್ಲಿ ಸಭೆ ನಡೆಸಿದ ಬಳಿಕ ಲೋಕೋಪಯೋಗಿ ಇಲಾಖೆಗೆ ಮುತ್ತಿಗೆ ಹಾಕಲಾಗುವುದು ಎಂದರು.

ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಮಾತನಾಡಿ, ಕೊಡಗು ಜಿಲ್ಲೆಯ ರಸ್ತೆಗಳ ಸ್ಥಿತಿ ಅತ್ಯಂತ ಹೀನಾಯವಾಗಿದೆ. ಗ್ರಾಮೀಣ ಭಾಗದ ರಸ್ತೆಗಳು ಅಧೋಗತಿಗೆ ತಲುಪಿವೆ. ಜಿಲ್ಲೆಯ ಇಬ್ಬರು ಶಾಸಕರು ರಸ್ತೆಗಳ ಅಭಿವೃದ್ಧಿ ಸೇರಿದಂತೆ ಕೈಗೊಂಡಿರುವ ವಿವಿಧ ಕಾಮಗಾರಿಗಳ ಕುರಿತು ಶ್ವೇತಪತ್ರ ಹೊರಡಿಸಬೇಕು ಎಂದು ಒತ್ತಾಯಿಸಿದರು. ಅತ್ತೂರು-ಯಡವನಾಡು ಪುನರ್ವಸತಿ ಪ್ರದೇಶವನ್ನು ಅರಣ್ಯ ಪ್ರದೇಶವೆಂದು ಪರಿಗಣಿಸಿರುವುದರಿಂದ ಹಾಗೂ ಸುಮಾರು 25 ಸಾವಿರ ಎಕರೆ ಕೃಷಿ ಭೂಮಿಯನ್ನು ಅರಣ್ಯವೆಂದು ಘೋಷಿಸಲು ಸರಕಾರ ಮುಂದಾಗಿರುವುದರಿಂದ ಕೃಷಿಕರಲ್ಲಿ ಆತಂಕ ಎದುರಾಗಿದೆ. ಎಂದು ಅಸಮಾಧಾನ ವ್ಯಕ್ತಪಡಿಸಿದರು. ನ.23ರಂದು ಬೆಟ್ಟದಳ್ಳಿಯಿಂದ ಸೋಮವಾರಪೇಟೆಯವರೆಗೆ ನಡೆಯುವ ಪ್ರತಿಭಟನಾ ಜಾಥಾದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೂಡ ಪಾಲ್ಗೊಳ್ಳಲಿದ್ದಾರೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ. ಮೇದಪ್ಪ ಮಾತನಾಡಿ, ಸರಕಾರದ ರೈತ ವಿರೋಧಿ ಧೋರಣೆಯಿಂದ ಕೊಡಗಿನಲ್ಲಿ ಸಿ ಮತ್ತು ಡಿ ಭೂಮಿ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ ಎಂದು ಆರೋಪಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಪಿ. ಸುನಿಲ್ ಸುಬ್ರಮಣಿ ಮಾತನಾಡಿ, ಮುಖ್ಯಮಂತ್ರಿಗಳು ಇಡೀ ರಾಜ್ಯಕ್ಕೆ ಕಾವೇರಿ ನೀರನ್ನು ಒದಗಿಸುವ ಕೊಡಗು ಜಿಲ್ಲೆಗೆ ಸರಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಮನು ಮುತ್ತಪ್ಪ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ ಉಪಸ್ಥಿತರಿದ್ದರು.

ರಾಜಾಸೀಟ್‌ಗೆ ಪ್ರವೇಶ ನಿರ್ಬಂಧ

@nadubadewarthe; ಮಡಿಕೇರಿ ನ.16:-ರಸ್ತೆ ಮಡಿಕೇರಿ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಾಸೀಟು ಉದ್ಯಾನದ ಕಡೆಗೆ ಹೋಗುವ ರಸ್ತೆಯ ಕಾಂಕ್ರೀಟಿಕರಣಕ್ಕಾಗಿ ಉದ್ಯಾನಕ್ಕೆ ಸಾರ್ವಜನಿಕರ, ಪ್ರವಾಸಿಗರ ಪ್ರವೇಶವನ್ನು ನ.16ರಿಂದ ನ.30ರವರೆಗೆ ನಿರ್ಬಂಧಿಸಿ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಆದೇಶ ಹೊರಡಿಸಿದ್ದಾರೆ.

ಹಾಗೆಯೇ ಜಿಲ್ಲಾಧಿಕಾರಿ ಕಚೇರಿಗೆ ತೆರಳುವ ಅಡ್ಡ ರಸ್ತೆಯಿಂದ ಲಿವಾ ಕ್ಲಿನಿಕ್ವರೆಗಿನ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನೂ ನ.16ರಿಂದ ಡಿ.15ರವರೆಗೆ ನಿರ್ಬಂಧಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.



ನ.18,19ರಂದು ಕೊಡಗಿನ ಬಹುಪಾಲು ಕರೆಂಟ್ ಇರಲ್ಲ...

ಮೈಸೂರಿನ ಕಡಕೋಳದಲ್ಲಿ ನೂತನವಾಗಿ ನಿರ್ಮಿಸುತ್ತಿರುವ 2*500 ಎಂವಿಎ, 400 ಕೆವಿ ವಿದ್ಯುತ್ ಉಪಕೇಂದ್ರ ಮತ್ತು ಸಂಬಂಧಿತ 400 ಕೆ.ವಿ. ವಿದ್ಯುತ್ ಉಪಕೇಂದ್ರ ಮತ್ತು ಸಂಬಂಧಿತ 400 ಕೆ.ವಿ. ಮಾರ್ಗದ ಕಾಮಗಾರಿಯ ಪ್ರಯುಕ್ತ ಹಾಲಿ ಇರುವ 220 ಕೆ.ವಿ. ಬಸ್ತಿಪುರ, ತಮಡಹಳ್ಳಿ (ಹುಣಸೂರು) ವಿದ್ಯುತ್ ಮಾರ್ಗಕ್ಕೆ ತಂತಿ ಎಳೆಯುವ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ 220 ಕೆ.ವಿ. ಕುಶಾಲನಗರ ವಿದ್ಯುತ್ ಉಪಕೇಂದ್ರದಿಂದ ಸರಬರಾಜಾಗುವ ವಿದ್ಯುತ್ ಮಾರ್ಗವನ್ನು
ಸ್ಥಗಿತಗೊಳಿಸಬೇಕಾಗಿರುವುದರಿಂದ ಇದರ ವ್ಯಾಪ್ತಿಗೆ ಬರುವ 66/11 ಕೆ.ವಿ. ಮಡಿಕೇರಿ ವಿದ್ಯುತ್ ಉಪಕೇಂದ್ರ ಹಾಗೂ ವಿರಾಜಪೇಟೆ ಉಪಕೇಂದ್ರದಿಂದ ಸರಬರಾಜಾಗುವ 33/11 ಕೆ.ವಿ. ಮೂರ್ನಾಡು ಫೀಡರ್ ಮಾರ್ಗಗಳಲ್ಲಿ ನವೆಂಬರ್, 18 ಮತ್ತು 19 ರಂದು ಬೆಳಗ್ಗೆ 10 ರಿಂದ ಸಂಜೆ 05 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ಮಡಿಕೇರಿ ನಗರ, ರಾಜಾಸೀಟ್, ಗದ್ದಿಗೆ, ಕೋಟೆ, ಕುಂಡಾಮೇಸ್ತ್ರಿ, ಓಂಕಾರೇಶ್ವರ, ಜಿ.ಟಿ.ರಸ್ತೆ, ಕೆ.ಎಸ್.ಆರ್.ಟಿ.ಸಿ., ಮೇಕೇರಿ, ಭಾಗಮಂಡಲ, ಬೋಯಿಕೇರಿ, ಸಂಪಾಜೆ, ಗಾಳಿಬೀಡು, ಮಕ್ಕಂದೂರು, ಹೆಬ್ಬೆಟ್ಟಗೇರಿ, ಕೆ. ಬಾಡಗ, ತಾಳತ್ತಮನೆ, ಬೆಟ್ಟಗೇರಿ, ಚೆಟ್ಟಿಮಾನಿ, ಚೇರಂಬಾಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಹಾಗೂ 33 ಕೆ.ವಿ. ಮೂರ್ನಾಡು, ಮರಗೋಡು, ಕುಂಜಿಲ, ಎಮ್ಮೆಮಾಡು, ಬಲ್ಲಮಾವಟಿ, ಹಾಕತ್ತೂರು, ಹೊಸ್ಕೇರಿ, ಹೊದ್ದೂರು, ನರಿಯಂದಡ, ನಾಪೋಕ್ಲು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಕೋರಿದೆ.

ಹಾಗೆಯೇ 220/66/11 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರ ಕುಶಾಲನಗರ ಮತ್ತು 66/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರ ಸುಂಟಿಕೊಪ್ಪ ಮತ್ತು ಮಾದಾಪುರದಿಂದ ಹೊರಹೊಮ್ಮುವ ಮಾರ್ಗಗಳಲ್ಲಿ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ನಡೆಸಬೇಕಾಗಿರುವುದರಿಂದ ನವೆಂಬರ್ 18 ಮತ್ತು 19 ರಂದು ಬೆಳಗ್ಗೆ 10 ರಿಂದ ಸಂಜೆ 05.00 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಈ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಕುಶಾಲನಗರ ಟೌನ್, ನಂಜರಾಯಪಟ್ಟಣ, ಗುಡ್ಡೆಹೊಸೂರು, ಹೆಬ್ಬಾಲೆ, ಕಣಿವೆ, ಮಲ್ಲೇನಹಳ್ಳಿ, ಭುವನಗಿರಿ, ಇಂಡಸ್ಟ್ರಿಯಲ್ ಏರಿಯಾ, ಕೂಡಿಗೆ, ಕೂಡುಮಂಗಳೂರು, ಶಿರಂಗಾಲ, ಕಾನ್‌ಬೈಲು, ಅಂದಗೋವೆ, ನಾಕೂರು, ಹಾದ್ರೆ ಹಿರೂರು, ಹಟ್ಟಿಹೊಳೆ, ಗರ್ವಾಲೆ, ಗರಗಂದೂರು, ಕಾಂಡನಕೊಲ್ಲಿ, ಕುಂಬೂರು, ಮಾದಾಪುರ, ಪನ್ಯ, ಚೆಟ್ಟಳ್ಳಿ, ನಾಕೂರು ಶಿರಂಗಾಲ, ವಾಲ್ನೂರು ತ್ಯಾಗತ್ತೂರು, ಪೊನ್ನತ್‌ಮೊಟ್ಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಕೋರಿದೆ.

ಹಾಗೆಯೇ ಗೋಣಿಕೊಪ್ಪ ವಿದ್ಯುತ್ ವಿತರಣಾ ಉಪಕೇಂದ್ರದಿಂದ ಹೊರಹೊಮ್ಮುವ ಈ5 ಕೆ. ಬಾಡಗ ಫೀಡರ್ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಸಬೇಕಾಗಿರುವುದರಿಂದ ನವೆಂಬರ್, 18 ರಂದು ಬೆಳಗ್ಗೆ 10 ರಿಂದ ಸಂಜೆ 05 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ಕೆ.ಬಾಡಗ, ಆಲಂದೋಡು, ಹೆರ್ಮಾಡು, ಕುಮಟೂರು, ನಾಲ್ಕೇರಿ, ಕೆ.ಎಂ.ಕೊಲ್ಲಿ, ಪಲ್ಲೇರಿ ಹಾಗೂ ಎಫ್15 ಬೆಕ್ಕೆಸೊಡ್ಲೂರು ಫೀಡರ್ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಸಬೇಕಾಗಿರುವುದರಿಂದ ನವೆಂಬರ್, 19 ರಂದು ಬೆಳಗ್ಗೆ 10 ರಿಂದ ಸಂಜೆ 05 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ಕಾನೂರು, ಬೆಕ್ಕೆಸೊಡ್ಲೂರು, ಕೋತೂರು, ಬಲ್ಯಮಂಡೂರು, ವಡ್ಡರಮಾಡು, ನಿಡುಗುಂಬ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಕೋರಿದೆ.

ಹಾಗೆಯೇ ಸೋಮವಾರಪೇಟೆ ಉಪವಿಭಾಗದ 66 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಮಾರ್ಗಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಸಬೇಕಾಗಿರುವುದರಿಂದ ನವೆಂಬರ್, 18



ಮತ್ತು 19 ರಂದು ಬೆಳಗ್ಗೆ 06 ರಿಂದ ಸಂಜೆ 06 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ಎಫ್4 ಸೋಮವಾರಪೇಟೆ ಟೌನ್ ಫೀಡರ್, ಎಫ್6 ಅಬ್ಬೂರುಕಟ್ಟೆ ಫೀಡರ್–ಅಬ್ಬೂರುಕಟ್ಟೆ, ನೇರುಗಳಲೆ, ತಣ್ಣೀರುಹಳ್ಳಿ, ಅರೆಯೂರು,ಹೊಸಳ್ಳಿ, ಎಫ್3 ಐಗೂರು-ಐಗೂರು, ಒಳಗುಂದ, ಹೊಸತೋಟ, ಗರಗಂದೂರು, ಎಫ್5 ಕಾರ್ಕಳ್ಳಿ, ಎಫ್2 ಶಾಂತಳ್ಳಿ ಫೀಡರ್, ಎಫ್1 ದೊಡ್ಡಮಳ್ತೆ ಫೀಡರ್, ದೊಡ್ಡಮಳ್ತೆ, ಹಣಕೋಡು, ಗೆಜ್ಜೆಹಣಕೋಡು, ಚಿಕ್ಕತೋಳೂರು, ಕೂಗೆಕೋಡಿ, ಯಡೂರು, ತಾಕೇರಿ, ಕಿರಗಂದೂರು, ಸೋಮವಾರಪೇಟೆ ಪಟ್ಟಣ, ಹಾನಗಲ್ಲು, ನಗರೂರು,ದುದ್ದುಗಲ್ಲು, ಗಾಂಧೀನಗರ, ಐಗೂರು,ಸಜ್ಜಳ್ಳಿ, ಹೊಸತೋಟ, ಗರಗಂದೂರು,ಕಾಜೂರು, ನೆಗಳ್ಳಿ-ಕಾರ್ಕಳ್ಳಿ, ನೇರುಗಳಲೆ, ಯಲಕನೂರು, ಹೊಸಳ್ಳಿ, ಎಂ.ಜಿ.ರಸ್ತೆ, ಬಾಣಾವಾರ ರಸ್ತೆ, ಬೀದಳ್ಳಿ, ಜಕ್ಕಳ್ಳಿ, ಕುಡಿಗಾಣ, ಕೊತ್ನಳ್ಳಿ, ಕುಸುಜೂರು, ಕಾರೆಕೊಪ್ಪ, ಹೊಸತೋಟ, ಎಫ್2 ಆಲೂರು ಸಿದ್ಧಾಪುರ ಫೀಡರ್, ಎಫ್1 ಗೋಣಿಮಾರೂರು ಫೀಡರ್, ಎಫ್3 ಮಾಲಂಬಿ ಫೀಡರ್, ಎಫ್5 ಅಂಕನಹಳ್ಳಿ ಫೀಡರ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಕೋರಿದೆ.

ವಿರಾಜಪೇಟೆ ಉಪವಿಭಾಗದ 220 ಕೆ.ವಿ. ಎಂಯುಎಸ್‌ಎಸ್ ಕುಶಾಲನಗರ ಇಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಸಬೇಕಾಗಿರುವುದರಿಂದ, ನವೆಂಬರ್, 18 ಮತ್ತು 19 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ವಿರಾಜಪೇಟೆ, ಸಿದ್ಧಾಪುರ, ಅಮ್ಮತ್ತಿ ಮತ್ತು ಪಾಲಿಬೆಟ್ಟ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ಮಕ್ಕಳ ದಿನಾಚರಣೆ ಪ್ರಯುಕ್ತ ಮಡಿಕೇರಿಯಲ್ಲಿ ಚಿತ್ರಕಲಾ ಸ್ಪರ್ಧೆಗೆ ಆಹ್ವಾನ...



@nadubadewarthe; ಮಡಿಕೇರಿ ನ.16:- ಮಕ್ಕಳ ದಿನಾಚರಣೆಯ ಅಂಗವಾಗಿ SS ಆಸ್ಪತ್ರೆ ಮತ್ತು RK LABS ವತಿಯಿಂದ ನವೆಂಬರ್ 22ರ ಭಾನುವಾರ, ALG ಕ್ರೆಸೆಂಟ್ ಶಾಲಾ ಆವರಣ, ಮಹದೇವಪೇಟೆ, ಮಡಿಕೇರಿಯಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಶಾಲಾ ಮಕ್ಕಳಿಗಾಗಿ ಜಿಲ್ಲಾಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

LKG ಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮೂರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಕೊಡಗು ಜಿಲ್ಲೆಯ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮಲ್ಲಿರುವ ಕಲಾತ್ಮಕ ಪ್ರತಿಭೆಯನ್ನು ಪ್ರದರ್ಶಿಸಬೇಕೆಂದು SS ಆಸ್ಪತ್ರೆ, ಮಹದೇವಪೇಟೆ, ಮಡಿಕೇರಿಯ ವ್ಯವಸ್ಥಾಪಕ ನಿರ್ದೇಶಕಿ ಡಾ. ಶಿಲ್ಪಾ ಸತೀಶ್ ಮನವಿ ಮಾಡಿದ್ದಾರೆ.

ಮೊದಲ ವಿಭಾಗ: LKG, UKG ಹಾಗೂ 1ನೇ ತರಗತಿಯ ವಿದ್ಯಾರ್ಥಿಗಳಿಗೆ 'ನಾನು ಮತ್ತು ನನ್ನ ತಾಯಿ' (My Mother and Me) ವಿಷಯವಾಗಿರುತ್ತದೆ. ಎರಡನೇ ವಿಭಾಗ: 2ರಿಂದ 6ನೇ ತರಗತಿಯ ವಿದ್ಯಾರ್ಥಿಗಳಿಗೆ 'ಮೀಸಲು ಅರಣ್ಯ' (Reserve Forest) ವಿಷಯವಾಗಿರುತ್ತದೆ. ಮೂರನೇ ವಿಭಾಗ: 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ 'ವಿದ್ಯಾರ್ಥಿ ಜೀವನದಲ್ಲಿ ಸಮಯದ ಪ್ರಾಮುಖ್ಯತೆ' (Importance of Time in Students' Life) ವಿಷಯವಾಗಿರುತ್ತದೆ.

ಮೂರು ವಿಭಾಗಗಳಲ್ಲಿಯೂ ವಿಜೇತರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ನಗದು ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಆಕರ್ಷಕ ಟ್ರೋಫಿಗಳನ್ನು ನೀಡಿ ಗೌರವಿಸಲಾಗುತ್ತದೆ.

ಅಂದು ಬೆಳಿಗ್ಗೆ ಬೆಳಗ್ಗೆ 8.30ರಿಂದ ಸ್ಥಳದಲ್ಲೇ ನೋಂದಣಿ ಆರಂಭವಾಗಲಿದ್ದು, ಬೆಳಗ್ಗೆ 9.30ರಿಂದ 11.30ರವರೆಗೆ ಸ್ಪರ್ಧೆ ನಡೆಯಲಿದೆ.

: ಬೆಳಗ್ಗೆ 11.45ಕ್ಕೆ ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ಹಾಗೂ ಉದ್ಘಾಟನೆಯನ್ನು ಕೊಡ್ಲಿಪೇಟೆಯ ಶ್ರೀ ಕ್ಷೇತ್ರ ಕಲ್ಲುಮಠದ ಪೂಜ್ಯ ಶ್ರೀ ಶ್ರೀ ಮಹಾಂತ ಸ್ವಾಮಿಗಳು ವಹಿಸಲಿದ್ದಾರೆ. ಅಥಿತಿಗಳಾಗಿ SS ಆಸ್ಪತ್ರೆಯ ಮಾರ್ಗದರ್ಶಕರು ಹಾಗೂ ಹಿರಿಯರಾದ ಎಚ್.ಎಂ. ನಂದಕುಮಾರ್, ಡಾ. ಎಚ್.ವಿ. ದೇವದಾಸ್, ನಗರಸಭೆಯ ಮಾಜಿ ಸದಸ್ಯರಾದ ಮಹೇಶ್ ಜೈನಿ, ಕಲಾವತಿ, ಸವಿತಾ ರಾಕೇಶ್ ಹಾಗೂ ಆಡಿಟರ್ ಹನೀಫ್ ಅವರು ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.

ಮಡಿಕೇರಿಯ ಮೃಣಾಲಿನಿ ಚಿನ್ನಪ್ಪ ಅವರು ಚಿತ್ರಕಲಾ ಸ್ಪರ್ಧೆಯ ತೀರ್ಪುಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ.

ರಕ್ತದಾನ ಸೇವಕರಿಗೆ ಸನ್ಮಾನ:

ಇದೇ ಸಂದರ್ಭದಲ್ಲಿ ಕೊಡಗು ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ರಕ್ತದಾನ ಹಾಗೂ ರಕ್ತದಾನದ ಕುರಿತು ಜಾಗೃತಿ ಮೂಡಿಸುವ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಸಮಾಜಸೇವೆ ಮಾಡುತ

ನಡುಬಾಡೆ ಇ-ಪತ್ರಿಕೆ
ASDCA No; SCAB13122025/5632149 JDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ:16/11/26, ಸೋಮವಾರ 8951073556 ನಾಳಂಕೆ : ಬಿರ್ಯಾರ್ - 01, ತಿಂಗಳಾಚೆ
www.nadubadenews.com ಸಂಪಾದಕ:ಚಾಮರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews

ನಾಳೆಯ (16 ನವೆಂಬರ್, 2026) ದ್ವಾದಶ ರಾಶಿಗಳ ಭವಿಷ್ಯ

ಮೇಷ
ಹೊಸ ಯೋಜನೆಗಳಿಗೆ ಚಾಲನೆ ನೀಡಲು ಉತ್ತಮ ದಿನ. ವ್ಯಾಪಾರದಲ್ಲಿ ಲಾಭ ಹೆಚ್ಚಾಗಲಿದೆ. ಕುಟುಂಬದ ಸದಸ್ಯರೊಡನೆ ಸಂತೋಷದ ಕ್ಷಣಗಳನ್ನು ಕಳೆಯುವಿರಿ.

ವೃಷಭ
ಆರ್ಥಿಕ ಪರಿಸ್ಥಿತಿ ಸ್ಥಿರವಾಗಿರುತ್ತದೆ. ನಿಮ್ಮ ಮಾತಿನಿಂದ ಇತರರನ್ನು ಆಕರ್ಷಿಸುವಿರಿ. ಆರೋಗ್ಯದ ಕಡೆ ಸ್ವಲ್ಪ ಗಮನ ಹರಿಸಿ.

ಮಿಥುನ
ಕೆಲಸದ ಸ್ಥಳದಲ್ಲಿ ನಿಮ್ಮ ಪ್ರತಿಭೆಗೆ ತಕ್ಕ ಮನ್ನಣೆ ಸಿಗಲಿದೆ. ದೂರ ಪ್ರಯಾಣ ಮಾಡುವ ಸಂಭವವಿದೆ, ಅದು ಲಾಭದಾಯಕವಾಗಲಿದೆ.

ಕರ್ಕಾಟಕ
ಮನಸ್ಸಿನಲ್ಲಿ ಹೊಸ ಉತ್ಸಾಹ ಮೂಡಲಿದೆ. ಸ್ನೇಹಿತರಿಂದ ಬೆಂಬಲ ಸಿಗಲಿದೆ. ಹೂಡಿಕೆ ವಿಚಾರದಲ್ಲಿ ಎಚ್ಚರಿಕೆ ವಹಿಸಿ.

ಸಿಂಹ
ಉದ್ಯೋಗಿಗಳಿಗೆ ಬಡ್ತಿ ಅಥವಾ ಮೇಲಧಿಕಾರಿಗಳ ಪ್ರಶಂಸೆ ದೊರೆಯುವ ಸಾಧ್ಯತೆಯಿದೆ. ಸಾಮಾಜಿಕ ಕೆಲಸಗಳಲ್ಲಿ ಆಸಕ್ತಿ ಹೆಚ್ಚಾಗುತ್ತದೆ.

ಕನ್ಯಾ
ಆರೋಗ್ಯದ ವಿಚಾರದಲ್ಲಿ ಸುಧಾರಣೆ ಕಂಡುಬರಲಿದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಏಕಾಗ್ರತೆ ಅಗತ್ಯ. ಖರ್ಚು-ವೆಚ್ಚಗಳ ಮೇಲೆ ನಿಗಾ ಇಡಿ.

ತುಲಾ
ಪಾಲುದಾರಿಕೆ ವ್ಯವಹಾರಗಳಲ್ಲಿ ಉತ್ತಮ ಲಾಭ ಸಿಗಲಿದೆ. ಸಂಗಾತಿಯಿಂದ ಬೆಂಬಲ ಮತ್ತು ಪ್ರೀತಿ ದೊರೆಯಲಿದೆ. ಮನಸ್ಸು ಪ್ರಶಾಂತವಾಗಿರುತ್ತದೆ.

ವೃಶ್ಚಿಕ
ಸಾಲಬಾಧೆಯಿಂದ ಮುಕ್ತಿ ಪಡೆಯುವ ಮಾರ್ಗಗಳು ಗೋಚರಿಸಲಿವೆ. ಶತ್ರುಗಳ ಮೇಲೆ ಜಯ ಸಾಧಿಸುವಿರಿ. ಆರೋಗ್ಯ ಉತ್ತಮವಾಗಿರುತ್ತದೆ.

ಧನು
ಸೃಜನಶೀಲ ಕೆಲಸಗಳಲ್ಲಿ ಯಶಸ್ಸು ಸಿಗಲಿದೆ. ಮಕ್ಕಳಿಂದ ಶುಭ ಸುದ್ದಿ ಕೇಳುವಿರಿ. ಧಾರ್ಮಿಕ ಕಾರ್ಯಗಳಲ್ಲಿ ಭಾಗಿ2ಯಾಗುವಿರಿ.

ಮಕರ
ಆಸ್ತಿ ಅಥವಾ ವಾಹನ ಖರೀದಿ ಯೋಗವಿದೆ. ಮನೆಯಲ್ಲಿ ಶಾಂತಿ ಮತ್ತು ನೆಮ್ಮದಿಯ ವಾತಾವರಣವಿರುತ್ತದೆ.

ಕುಂಭ
ಹೊಸ ಪರಿಚಯಗಳು ಭವಿಷ್ಯದಲ್ಲಿ ಸಹಾಯ ಮಾಡಲಿವೆ. ಧನಲಾಭದ ಸೂಚನೆ ಇದೆ. ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ.

ಮೀನ
ನಿಮ್ಮ ಗುರಿಗಳನ್ನು ತಲುಪಲು ಹೊಸ ದಾರಿಗಳು ತೆರೆದುಕೊಳ್ಳಲಿವೆ. ಹಿರಿಯರ ಸಲಹೆಯನ್ನು ನಿರ್ಲಕ್ಷಿಸಬೇಡಿ.

(ಗಮನಿಸಿ: ರಾಶಿ ಭವಿಷ್ಯವು ಸಾಮಾನ್ಯ ಗ್ರಹಚಾರವನ್ನು ಆಧರಿಸಿದ್ದು, ವೈಯಕ್ತಿಕ ಜಾತಕಕ್ಕೆ ಅನುಗುಣವಾಗಿ ಸ್ವಲ್ಪ ಬದಲಾವಣೆಗಳಿರಬಹುದು.)

ನಾಲ್ನಾಡ್ ಪ್ಲಾಂಟರ್ಸ್ ರಿಕ್ರಿಯೇಷನ್ ಅಸೋಸಿಯೇಷನ್‌ಂಜಿ: PSC ಅಜ್ಜಿಕುಟ್ಟಿರ ಪೊನ್ನಣ್ಣ ಅಯಿಂಕ್ ತೊಮ್ಮಾನ...



ದುಗ್ಗಳ

Nadubadenews;ನ.16;ನಾಪೋಕ್; ನಾಲ್ನಾಡ್ ಪ್ಲಾಂಟರ್ಸ್ ರಿಕ್ರಿಯೇಷನ್ ಅಸೋಸಿಯೇಷನ್ (ರಿ) ಅಯಿಂಗಡ ಪುದಿಯ ಬೆಂದು ಬಿಡಾ ಬೊಳಿಕ್ ಇಡುವ ಆಯಿಮೆಲ್, ಮುಖ್ಯಮಂತಿರ ರಾಜಕೀಯ ಕಾರ್ಯದರ್ಶಿ, ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಪೊನ್ನಣ್ಣ ಪಿಂಞ ಅಂತಾರಷ್ಟ್ರೀಯ ಕೇಳಿರ, ರಾಜ್ಯೋತ್ಸವ ಬಿರ್ದ್, ಕರ್ನಾಟಕ ಕ್ರೀಡಾ ರತ್ನ ಬಿರ್ದ್ ಪಡ್‌ಂದಿತುಳ್ಳ ಮಾಳೆಯಂಡ ಅಶೋಕ್ ಪೂವಯ್ಯ ಅಯಿಂಗಳ ತೊಮ್ಮಾನ ಮಾಡ್‌ಚಿ.

ನಾಲ್ನಾಡ್ ಪ್ಲಾಂಟರ್ಸ್ ರಿಕ್ರಿಯೇಷನ್ ಅಸೋಸಿಯೇಷನ್ ಕ್ಲಬ್ ಕೊರವುಕಾರ ಬಾಚಮಂಡ ಲವ ಚಿಣ್ಣಪ್ಪ ಅಯಿಂಗಡ ಕೊರವುಕಾರಕೆಲ್ ನಡ್‌ಂದ ಈ ಆಯಿಮೆಲ್ ಖನಪಟ್ಟ ಬೆಂದುವಳಾಯಿತ್, ಕೊಡವ ಸಮಾಜ ಕೊರವುಕಾರ, ನಿ. ನಬಾರ್ಡ್ ಡಿ.ಜಿ.ಎಂ. ಮುಂಡ0ಡ ಸಿ. ನಾಣಯ್ಯ, ಕೊಡವು ಡಿಸಿಸಿ ಬ್ಯಾಂಕ್ ಕೂಟ್‌ಕೊರವುಕಾರ ಕೇಟೋಳಿರ ಹರೀಶ್ಹರೀಶ್ ಪೂವಯ್ಯ , ಕಾಫಿ ಬೊಳೆಕಾರ ಬಿದ್ದಾಟ0ಡ ಕಾರ್ಯಪ್ಪ, ಕೇಟೋಳಿರ ಶಾರದ ಪಳಂಗಪ್ಪ, ಉದ್ಯಮಿ ಮುಕ್ಕಾಟಿರ ಎನ್. ಸುರೇಶ್ ಮಾಚಯ್ಯ , ಕ್ಲಬ್ ಕೂಟ್‌ಕೊರವುಕಾರ ಅರೆಯಡ ಎಂ. ರತ್ನ ಪೆಮ್ಮಯ್ಯ , ಕಾರ್ಯಕಾರ ಚೀಯಕ್‌ಪೂವಂಡ ಎಂ. ಅಪ್ಪಚ್ಚು , ಲೆಕ್ಕಪಟ್ಟಿಕಾರ ಕರವಂಡ ಪಿ. ಬೆಲ್ಲು ಬೆಳ್ಳಿಯಪ್ಪ , ಕೂಟಾಳಿಯಳಾನ ಬೊಳ್ಳಚೆಟ್ಟಿರ ಎಂ. ಸುರೇಶ್, ಅರೆಯಡ ಎಂ. ಅಶೋಕ್, ಚೆನಂಡ ಎಂ.ಸುರೇಶ್ ನಾಣಯ್ಯ, ಶಿವಚಳಿಯಂಡ ಎಂ. ಅಂಬಿ ಕಾರಿಯಪ್ಪ, ಕೇಟೋಳಿರ ಪಿ. ವಿನೋದ್ ವಿನು, ಕೇಟೋಳಿರ ಎ. ಶಮ್ಮಿ ಸುಬ್ಬಯ್ಯ , ಕುಂಡ್ಯೋಲಂಡ ಬಿ. ಬೋಪಣ್ಣ , ಚೋಕಿರ ಎಸ್. ರೋಷನ್ ಪಿಂಞ ಪೆರಿಯ್ಯೆಂಗ ಅಳಿಯ್ಯೆಂಗ, ಮೇಲ್ಮಾನಿಕೆದಾರ ಆರ್ ಮಣಿ ವಿಶ್ವನಾಥ್ ಕೂಡ್‌ನನಕೆ ಮಾಜನ ಬೆಂದುವ ಕೂಡಿಯಾಡಿತಿಂಜತ್.

ನಾಟಿ ಕೋಳಿ ಮರಿ ವಿತರಣೆ: ಅರ್ಜಿ ಆಹ್ವಾನ



Nadubadenews;ನ.16; ಮಡಿಕೇರಿ: -ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಲ ನಿಯಮಿತ ಮೈಸೂರು ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ 2026-27ನೇ ಸಾಲಿನಲ್ಲಿ ಗ್ರಾಮೀಣ ರೈತ ಮಹಿಳೆಯರಿಗೆ ಐದು ವಾರದ ನಾಟಿ ಕೋಳಿ ಮರಿಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಜಿಲ್ಲೆಯ ಕುಶಾಲನಗರ ತಾಲ್ಲೂಕಿಗೆ ಮಾತ್ರ 99(ಪರಿಶಿಷ್ಟ ಜಾತಿ ಶೇ.17, ಪರಿಶಿಷ್ಟ ಪಂಗಡ ಶೇ.7, ಹಿಂದುಳಿದ ವರ್ಗ ಶೇ.32, ಸಾಮಾನ್ಯ ಶೇ.44) ಗುರಿ ನಿಗಧಿಯಾಗಿದ್ದು ಮೀಸಲಾತಿ ಅನ್ವಯ ಆಯ್ಕೆಯಾಗುವ ಪ್ರತಿ ಫಲಾನುಭವಿಗಳಿಗೆ ಐದು ವಾರದ ನಾಟಿ ಕೋಳಿ ಮರಿಗಳನ್ನು ಉಚಿತವಾಗಿ ವಿತರಣೆ ಮಾಡಲಾಗುವುದು. ಆಸಕ್ತ ಫಲಾನುಭವಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಹಾಗೂ ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರು ಪಶು ಆಸ್ಪತ್ರೆ, ಕುಶಾಲನಗರ ಆಸ್ಪತ್ರೆ 9448422269, ಪಶುವೈದ್ಯಾಧಿಕಾರಿ ಪಶು ಆಸ್ಪತ್ರೆ ಸುಂಟಿಕೊಪ್ಪ 9880967832, ಪಶು ವೈದ್ಯಾಧಿಕಾರಿ ಪಶು ಚಿಕಿತ್ಸಾಲಯ ಹೆಬ್ಬಾಲೆ 7349320828 ನ್ನು ಸಂಪರ್ಕಿಸಲು ಕೋರಿದೆ. ಅರ್ಜಿಯನ್ನು ಭರ್ತಿ ಮಾಡಿ ನವೆಂಬರ್, 23 ರೊಳಗೆ ಸಹಾಯಕ ನಿರ್ದೇಶಕರು ಪಶು ಆಸ್ಪತ್ರೆ, ಕುಶಾಲನಗರ ಕಚೇರಿಗೆ ಸಲ್ಲಿಸುವಂತೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು ಉಪ ನಿರ್ದೇಶಕರು ತಿಳಿಸಿದ್ದಾರೆ.

ಬೇಳೂರಿನಲ್ಲಿ ಯಶಸ್ವೀ ಪ್ರಜಾ ಸೇವೆ...



Nadubadenews;ನ.16; ಮಡಿಕೇರಿ: ಸರ್ಕಾರದ ಸೌಲಭ್ಯಗಳನ್ನು ನೇರವಾಗಿ ಗ್ರಾಮಸ್ಥರ ಮನೆಬಾಗಿಲಿಗೆ ತಲುಪಿಸುವ ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿರುವ 'ಪ್ರಜಾಸೇವಾ ಅಭಿಯಾನ'ವು ಬೇಳೂರು ಗ್ರಾಮದಲ್ಲಿ ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮದಲ್ಲಿ ವಿವಿಧ ಸೌಲಭ್ಯ ಕೋರಿ 30ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದು, ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಬೇಳೂರು ಗ್ರಾಮದಲ್ಲಿ ನಡೆದ ಪ್ರಜಾಸೇವಾ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದ ಶಾಸಕ ಮಂತರ್ ಗೌಡ ಅವರು, ಸಾರ್ವಜನಿಕರು ತಮ್ಮ ವಿವಿಧ ಬೇಡಿಕೆಗಳು ಹಾಗೂ ಸಮಸ್ಯೆಗಳ ಪರಿಹಾರಕ್ಕಾಗಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಈ ಅಭಿಯಾನವು ಅತ್ಯಂತ ಸಹಕಾರಿಯಾಗಿದೆ ಎಂದರು. ಸಾರ್ವಜನಿಕರಿಂದ ಸ್ವೀಕರಿಸಲಾದ ಅರ್ಜಿಗಳನ್ನು ಯಾವುದೇ ವಿಳಂಬವಿಲ್ಲದೆ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳನ್ನು ಶೀಘ್ರವಾಗಿ ತಲುಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಸ್ಥಳದಲ್ಲೇ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಲಾಯಿತು ಹಾಗೂ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಅಹವಾಲುಗಳನ್ನು ಸ್ವೀಕರಿಸಿ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಸ್ಥಳೀಯ ಗ್ರಾಮ ಪಂಚಾಯತ್ ಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಘತ ಕಾಲದಲ್ಲಿ ಈ ದಿನ... 16 ನವೆಂಬರ್ 2026



ಸಂಗ್ರಹ;
ಕರಿನೆರವಂಡ ಡ್ಯಾನಿ ಕುಶಾಲಪ್ಪ

⭐ *ರಾಷ್ಟ್ರೀಯ ಪತ್ರಿಕಾ ದಿನ (1966).* ಭಾರತೀಯ ಪತ್ರಿಕಾ ಮಂಡಳಿಯು (Press Council of India) ಅಧಿಕೃತವಾಗಿ ಕಾರ್ಯಾರಂಭ ಮಾಡಿದ ನೆನಪಿಗಾಗಿ ಪ್ರತಿ ವರ್ಷ ಈ ದಿನವನ್ನು ಆಚರಿಸಲಾಗುತ್ತದೆ

⭐ *ಸಚಿನ್ ತೆಂಡೂಲ್ಕರ್ ನಿವೃತ್ತಿ ಮತ್ತು ಭಾರತ ರತ್ನ ಘೋಷಣೆ (2013).* ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ವಾಂಖೆಡೆ ಕ್ರೀಡಾಂಗಣದಲ್ಲಿ ತಮ್ಮ ಕೊನೆಯ ಅಂತಾರಾಷ್ಟ್ರೀಯ ಪಂದ್ಯವನ್ನಾಡಿ ನಿವೃತ್ತಿ ಘೋಷಿಸಿದರು. ಅದೇ ದಿನ ಭಾರತ ಸರ್ಕಾರ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ಘೋಷಿಸಿತು.

⭐ *ಬಾಲಾಜಿ ವಿಶ್ವನಾಥ್ ಪೇಶ್ವೆಯಾಗಿ ನೇಮಕ (1713).* ಮರಾಠಾ ಚಕ್ರವರ್ತಿ ಶಾಹು ಮಹಾರಾಜರು ಬಾಲಾಜಿ ವಿಶ್ವನಾಥ್ ಅವರನ್ನು ಮರಾಠಾ ಸಾಮ್ರಾಜ್ಯದ ಪೇಶ್ವೆಯಾಗಿ ನೇಮಿಸಿದರು

⭐ *ದಕ್ಷಿಣ ಆಫ್ರಿಕಾಕ್ಕೆ ಭಾರತೀಯ ಕಾರ್ಮಿಕರ ಆಗಮನ (1860).* ಒಪ್ಪಂದದ ಕಾರ್ಮಿಕರ ಮೊದಲ ತಂಡವು ಭಾರತದಿಂದ ದಕ್ಷಿಣ ಆಫ್ರಿಕಾದ ನಟಾಲ್ ಬಂದರಿಗೆ ತಲುಪಿತು

⭐• *ಕರ್ತಾರ್ ಸಿಂಗ್ ಸರಭಾ ಬಲಿದಾನ (1915).* ಗದರ್ ಪಕ್ಷದ ಪ್ರಮುಖ ಕ್ರಾಂತಿಕಾರಿ ಕರ್ತಾರ್ ಸಿಂಗ್ ಸರಭಾ ಅವರು ತಮ್ಮ 19ನೇ ವಯಸ್ಸಿನಲ್ಲಿ ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟರು.

⭐ *ಇಂಕಾ ಸಾಮ್ರಾಜ್ಯದ ಪತನದ ಆರಂಭ (1532).* ಸ್ಪ್ಯಾನಿಷ್ ವಿಜಯಶಾಲಿ ಫ್ರಾನ್ಸಿಸ್ಕೊ ಪಿಜಾರೊ ಇಂಕಾ ಚಕ್ರವರ್ತಿ ಅಟಾಹುಲ್ಪಾನನ್ನು ಸೆರೆಹಿಡಿದನುಇಂಕಾ ಸಾಮ್ರಾಜ್ಯದ ಪತನದ ಆರಂಭ (1532). ಸ್ಪ್ಯಾನಿಷ್ ವಿಜಯಶಾಲಿ ಫ್ರಾನ್ಸಿಸ್ಕೊ ಪಿಜಾರೊ ಇಂಕಾ ಚಕ್ರವರ್ತಿ ಅಟಾಹುಲ್ಪಾನನ್ನು ಸೆರೆಹಿಡಿದನು

⭐ *ವಿದ್ಯುತ್ ಪ್ರಸರಣದ ಮೈಲಿಗಲ್ಲು (1896).* ಅಮೆರಿಕದ ನಯಾಗರಾ ಜಲಪಾತದ ಜಲವಿದ್ಯುತ್ ಸ್ಥಾವರದಿಂದ ಬಫಲೋ ನಗರಕ್ಕೆ ಮೊದಲ ಬಾರಿಗೆ ದೀರ್ಘದೂರದ ವಿದ್ಯುತ್ ಪ್ರಸರಣ ಮಾಡಲಾಯಿತು.

⭐ *ಯುನೆಸ್ಕೋ (UNESCO) ಸ್ಥಾಪನೆ (1945)* . ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸ್ಥಾಪನೆಗೆ ಲಂಡನ್‌ನಲ್ಲಿ ಸಹಿ ಹಾಕಲಾಯಿತು.

⭐ *ಅರೆಸಿಬೊ ಸಂದೇಶ ರವಾನೆ (1974).* ಅನ್ಯಗ್ರಹ ಜೀವಿಗಳನ್ನು ಸಂಪರ್ಕಿಸುವ ಉದ್ದೇಶದಿಂದ ಮಾನವಕುಲದ ಮೊದಲ ಉದ್ದೇಶಪೂರ್ವಕ ರೇಡಿಯೋ ಸಂದೇಶವನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಯಿತು. ⭐ *ಹ್ಯಾರಿ ಪಾಟರ್ ಮೊದಲ ಚಲನಚಿತ್ರ ಬಿಡುಗಡೆ (2001).* ಜಗತ್ತಿನಾದ್ಯಂತ ಅಪಾರ ಜನಪ್ರಿಯತೆ ಗಳಿಸಿದ 'ಹ್ಯಾರಿ ಪಾಟರ್ ಅಂಡ್ ದಿ ಫಿಲಾಸಫರ್ಸ್ ಸ್ಟೋನ್' ಸಿನಿಮಾ ಬಿಡುಗಡೆಯಾಯಿತು

⭐ *ಲಿಯೋನೆಲ್ ಮೆಸ್ಸಿ ಪದಾರ್ಪಣೆ (2003).* ಫುಟ್‌ಬಾಲ್ ತಾರೆ ಲಿಯೋನೆಲ್ ಮೆಸ್ಸಿ ತಮ್ಮ 16ನೇ ವಯಸ್ಸಿನಲ್ಲಿ ಎಫ್‌ಸಿ ಬಾರ್ಸಿಲೋನಾ ತಂಡದ ಪರ ಮೊದಲ ಅಧಿಕೃತ ಪಂದ್ಯವನ್ನಾಡಿದರು.

⭐ *ಜನನ: ಖ್ಯಾತ ಉರ್ದು ಕವಿ ಅಕ್ಬರ್ ಅಲಹಾಬಾದಿ (1846),* ನೊಬೆಲ್ ಪ್ರಶಸ್ತಿ ವಿಜೇತ ಲೇಖಕ ಜೋಸ್ ಸರಮಾಗೊ (1922), ಇಂಗ್ಲಿಷ್ ಕಡಲ್ಗಾಲುವೆ ಈಜಿದ ಮೊದಲ ಭಾರತೀಯ ಮಿಹಿರ್ ಸೇನ್ (1930) ಹಾಗೂ ಬ್ಯಾಡ್ಮಿಂಟನ್ ತಾರೆ ಮತ್ತು ತರಬೇತುದಾರ ಪುಲ್ಲೇಲ ಗೋಪಿಚಂದ್ (1973) ಜನಿಸಿದರು

⭐ *ನಿಧನ: ಹಾಲಿವುಡ್ ನಟ ಕ್ಲಾರ್ಕ್ ಗೇಬಲ್ (1960),* ಮಲಯಾಳಂ ನಟ ಜಯನ್ (1980) ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಮಿಲ್ಟನ್ ಫ್ರೀಡ್ಮನ್ (2006) ನಿಧನರಾದರು

⭐ *ಲಿಯೋನೆಲ್ ಮೆಸ್ಸಿ ಪದಾರ್ಪಣೆ (2003).* ಅರ್ಜೆಂಟೀನಾದ ಫುಟ್ಬಾಲ್ ತಾರೆ ಲಿಯೋನೆಲ್ ಮೆಸ್ಸಿ ತಮ್ಮ 16ನೇ ವಯಸ್ಸಿನಲ್ಲಿ ಎಫ್‌ಸಿ ಬಾರ್ಸಿಲೋನಾ ತಂಡದ ಪರ ಮೊದಲ ಬಾರಿಗೆ ಹಿರಿಯರ ತಂಡದಲ್ಲಿ ಆಡಲು ಮೈದಾನಕ್ಕಿಳಿದರು.

⭐ *ಕಪಿಲ್ ದೇವ್ ಐತಿಹಾಸಿಕ ಬೌಲಿಂಗ್ (1983).* ಅಹಮದಾಬಾದ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ನಡೆದ ಟೆಸ್ಟ್ ಪಂದ್ಯದಲ್ಲಿ ಭಾರತದ ಮಾಜಿ ನಾಯಕ ಕಪಿಲ್ ದೇವ್ 83 ರನ್ ನೀಡಿ 9 ವಿಕೆಟ್ ಕಬಳಿಸುವ ಮೂಲಕ ಶ್ರೇಷ್ಠ ಪ್ರದರ್ಶನ ನೀಡಿದರು.

ಉದ್ಯೋಗ ಮಾಹಿತಿ...

1. ಕರ್ನಾಟಕ ಲೋಕ ಸೇವಾ ಆಯೋಗ (KPSC - ಗೆಜೆಟೆಡ್ ಪ್ರೊಬೇಷನರ್ಸ್ KAS)
* ವಿವರ: 319 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ (ತಹಶೀಲ್ದಾರ್, ಉಪವಿಭಾಗಾಧಿಕಾರಿ, ವಾಣಿಜ್ಯ ತೆರಿಗೆ ಅಧಿಕಾರಿ ಇತ್ಯಾದಿ) ಪ್ರಿಲಿಮ್ಸ್ ಪರೀಕ್ಷೆಯು ಬರುವ ನವೆಂಬರ್ 15, 2026 (ಭಾನುವಾರ) ರಂದು ಅತ್ಯಂತ ಹತ್ತಿರದಲ್ಲಿದೆ. ಅಭ್ಯರ್ಥಿಗಳು ಈಗಾಗಲೇ ಡೌನ್‌ಲೋಡ್ ಮಾಡಿಕೊಂಡಿರುವ ಪ್ರವೇಶ ಪತ್ರ (Admit Card) ಹಾಗೂ ಅಧಿಕೃತ ಗುರುತಿನ ಚೀಟಿಯೊಂದಿಗೆ ಪರೀಕ್ಷಾ ಕೇಂದ್ರಕ್ಕೆ ತೆರಳಲು ಸಿದ್ಧರಾಗಿರಿ. ಕೊನೆಯ ಕ್ಷಣದ ತಯಾರಿ ಚುರುಕುಗೊಳಿಸಿ!
* ಅಧಿಕೃತ ವೆಬ್‌ಸೈಟ್: https://kpsc.kar.nic.in
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - FDA & SDA ಬೃಹತ್ ನೇಮಕಾತಿ)
* ಹುದ್ದೆಗಳ ವಿವರ: ಪ್ರಥಮ ದರ್ಜೆ ಸಹಾಯಕರ (FDA), ದ್ವಿತೀಯ ದರ್ಜೆ ಸಹಾಯಕರ (SDA), ಅಕೌಂಟ್ಸ್ ಅಸಿಸ್ಟೆಂಟ್ ಹಾಗೂ ವಾರ್ಡನ್ ಹುದ್ದೆಗಳು.
* ಖಾಲಿ ಹುದ್ದೆಗಳು: ಒಟ್ಟು 5,431 ಹುದ್ದೆಗಳು (ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವಲಯ).
* ವಿದ್ಯಾರ್ಹತೆ: 2ನೇ ಪಿಯುಸಿ (PUC) ಅಥವಾ ಯಾವುದೇ ಮಾನ್ಯತೆ ಪಡೆದ ಪದವಿ (Degree).
* ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 34,100 ರಿಂದ ರೂ. 92,500+ ವರೆಗೆ.
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026 (ಶುಲ್ಕ ಪಾವತಿಗೆ 26 ನವೆಂಬರ್ 2026).
* ಅಧಿಕೃತ ವೆಬ್‌ಸೈಟ್: https://cetonline.karnataka.gov.in
3. ಇಂಡಿಯನ್ ಬ್ಯಾಂಕ್ (Indian Bank Apprentice Recruitment 2026)
* ಹುದ್ದೆಗಳ ವಿವರ: ಗ್ರಾಹಕ ಸೇವಾ ಅಪ್ರೆಂಟಿಸ್ (Apprentice) ಹುದ್ದೆಗಳು (ಕರ್ನಾಟಕ ವಲಯ ಸೇರಿದಂತೆ ಅಖಿಲ ಭಾರತ ಮಟ್ಟದಲ್ಲಿ).
* ಖಾಲಿ ಹುದ್ದೆಗಳು: 1,500 ಹುದ್ದೆಗಳು.
* ವಿದ್ಯಾರ್ಹತೆ: ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ (Degree).
* ಸಂಬಳ: ಮಾಸಿಕ ಸ್ಟೈಫಂಡ್ ರೂ. 15,000 (1 ವರ್ಷದ ಅವಧಿಗೆ). ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026.

ಭಾರತೀಯ ಅಂಚೆ ಇಲಾಖೆ (India Post GDS Recruitment 2026)
- ಹುದ್ದೆಗಳ ವಿವರ: ಗ್ರಾಮೀಣ ಡಾಕ್ ಸೇವಕ್ (GDS) - ಬ್ರಾಂಚ್ ಪೋಸ್ಟ್ ಮಾಸ್ಟರ್ (BPM) ಮತ್ತು ಅಸಿಸ್ಟೆಂಟ್ ಬ್ರಾಂಚ್ ಪೋಸ್ಟ್ ಮಾಸ್ಟರ್ (ABPM) ಹುದ್ದೆಗಳು (ಕರ್ನಾಟಕ ವೃತ್ತ).
- ಖಾಲಿ ಹುದ್ದೆಗಳು: 1,850 ಹುದ್ದೆಗಳು.
- ವಿದ್ಯಾರ್ಹತೆ: 10ನೇ ತರಗತಿ (SSLC) ಉತ್ತೀರ್ಣರಾಗಿರಬೇಕು ಮತ್ತು ಸ್ಥಳೀಯ ಭಾಷೆ ಕನ್ನಡದ ಜ್ಞಾನ ಕಡ್ಡಾಯ.
- ಸಂಬಳ: ಮಾಸಿಕ ರೂ. 10,000 ರಿಂದ ರೂ. 29,380 ರವರೆಗೆ (ಹುದ್ದೆಗೆ ಅನುಗುಣವಾಗಿ).
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ನವೆಂಬರ್ 2026.
- ಅಧಿಕೃತ ವೆಬ್‌

ನಡುಬಾಡೆ ಇ-ಪತ್ರಿಕೆ
ASDCA No; SCAB13122025/5632149 JDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ: 16/11/26,ಸೋಮವಾರ 8951073556 ನಾಳಂಕೆ : ಬಿರ್ಯಾರ್ - 01, ತಿಂಗಳಾಚೆ
www.nadubadenews.com ಸಂಪಾದಕ:ಚಾಮೆರ ದಿನೇಶ್‌ಬೆಳ್ಳಪ್ಪ nadubadenews@gmail.com @nadubadenews

ವಿರಾಜಪೇಟೆಯಲ್ಲಿ 51 ದಿನಗಳ 'ಕಲಾ ಉತ್ಸವ ಕೊಡಗು - 2026ಕ್ಕೆ ಚಾಲನೆ



ವರದಿ: ಕೆ. ಈಶಾನ್ವಿ

Nadubadenews;ನ.16:ವಿರಾಜಪೇಟೆ: ಇಂದಿನ ದಿನಗಳಲ್ಲಿ ಚಿತ್ರಕಲೆಗಳನ್ನು ಪ್ರೋತ್ಸಾಹಿಸುವ ಮನಸುಗಳು ಕ್ಷೀಣಿಸಿವೆ ಹಾಗೂ ಕಲಾವಿದರನ್ನು ಗೌರವಿಸುವುದು ಕಡಿಮೆಯಾಗಿದೆ. ವ್ಯಕ್ತಿಗೆ ಸಾವೂ ಬಂದರೂ ಆತನ ಕಲೆಗಳು ಸದಾ ಜೀವಂತವಾಗಿರುತ್ತವೆ ಎಂದು ವಿರಾಜಪೇಟೆ ಪುರಸಭೆಯ ಮಾಜಿ ಸದಸ್ಯ ಮೊಹಮ್ಮದ್ ರಾಫಿ ಅಭಿಪ್ರಾಯಪಟ್ಟರು.

ವಿರಾಜಪೇಟೆಯ ಆರ್ಜಿ ಗ್ರಾಮದ ಕೆ.ಎನ್. ಉಪೇಂದ್ರ ಅವರ ಖಾಸಗಿ ಸ್ಥಳದಲ್ಲಿ, ಸಾಧಿಕ್ ಆರ್ಟ್ಸ್ ಲಿಂಕ್ ವಿರಾಜಪೇಟೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಡಗು ಸಹಯೋಗದಲ್ಲಿ ಆಯೋಜಿಸಿರುವ 10ನೇ ವರ್ಷದ 'ಕಲಾ ಉತ್ಸವ ಕೊಡಗು-2026' ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿ, ಚಿತ್ರಕಲೆಗಳನ್ನು ಗೌರವಿಸುವುದು, ಪ್ರೋತ್ಸಾಹಿಸುವುದು ಮತ್ತು ಆರ್ಥಿಕವಾಗಿ ಸಹಾಯ ಮಾಡಿದರೆ ಕಲೆ ಹಾಗೂ ಕಲೆಗಾರರಿಗೆ ಉತ್ತಮ ವೇದಿಕೆ ಕಲ್ಪಿಸಿದಂತಾಗುತ್ತದೆ. ಸತತ 10 ವರ್ಷಗಳಿಂದ ಕಲಾಸಾಧಕರಾಗಿ ದುಡಿಯುತ್ತಿರುವ ಸಾಧಿಕ್ ಅವರ ಕಲಾ ರಥವು ಹೀಗೇಯೇ ಮುಂದೆ ಸಾಗಲಿ ಎಂದು ಅವರು ಹಾರೈಸಿದರು.

ಸಮಾರಂಭದಲ್ಲಿ ಮಾತನಾಡಿದ ಬೈರಂಬಾಡೆ ಗ್ರಾಮದ ಹಿರಿಯ ವುಡ್ ಆರ್ಟ್ ಕಲಾವಿದ ಮುಕ್ಕಾಟಿರ ವಿಠಲ್ ಸೋಮಯ್ಯ ಅವರು, ದೇಹಕ್ಕೆ ವಯಸ್ಸಾದರೂ ಕಲೆಗೆ ಎಂದೆಂದಿಗೂ ವಯಸ್ಸಾಗುವುದಿಲ್ಲ. ಮನುಷ್ಯ ತಾನು ಬದುತಿರುವಾಗ ಸಾಧಿಸಲು ಹಲವು ಮಾರ್ಗಗಳನ್ನು ಕಂಡುಕೊಳ್ಳುತ್ತಾನೆ. ಆದರೆ ಸತ್ತ ಬಳಿಕವೂ ಸಮಾಜ ಆತನ ಗುಣಗಾನ ಮಾಡುವಂತಾಗಬೇಕಾದರೆ ಅದು ಕೇವಲ ಕಲಾವಿದನಾಗಿದ್ದರೆ ಮಾತ್ರ ಸಾಧ್ಯ ಎಂದರು. ಚಿತ್ರಕಲೆ ಹಾಗೂ ಕಲೆಗೆ ಸಂಬಂಧಿಸಿದ ವಿಷಯಗಳಿಗೆ ಜೀವ ತುಂಬುವ ಕಲೆಗಾರರಿಗೆ ಸೂಕ್ತ ಮನ್ನಣೆ ದೊರೆಯುವಂತಹ ಶಿಬಿರಗಳು ನಿರಂತರವಾಗಿ ಆಯೋಜನೆಗೊಳ್ಳಬೇಕು ಹಾಗೂ ಸಾರ್ವಜನಿಕರಿಂದ ಪ್ರೋತ್ಸಾಹ ದೊರೆತಾಗ ಮಾತ್ರ ಇಂತಹ ಶಿಬಿರಗಳು ಸಾರ್ಥಕತೆ ಪಡೆದುಕೊಳ್ಳುತ್ತವೆ ಎಂದು ತಿಳಿಸಿದರು. ಶಿಬಿರದ ಲೋಗೋ ಬಿಡುಗಡೆಗೊಳಿಸಿ ಮಾತನಾಡಿದ ಭಾರತೀಯ ವಿದ್ಯಾಭವನದ ಚಿತ್ರಕಲಾ ಶಿಕ್ಷಕ ಪ್ರಸನ್ನ ಕುಮಾರ್, ಇಂದು ಚಿತ್ರಕಲೆಗಳನ್ನು ಬಿಡಿಸುವ ಕಲಾವಿದರು ತೆರೆಮರೆಯಲ್ಲಿದ್ದು, ತಮ್ಮ ಕಲಾ ಹವ್ಯಾಸವನ್ನು ಬಿಟ್ಟು ಜೀವನ ಸಾಗಿಸಲು ಬೇರೆ ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದಾರೆ. ಕಲೆಗಳನ್ನು ಜೀವಂತವಾಗಿರಿಸಲು ಇಂತಹ ಶಿಬಿರಗಳನ್ನು ಆಯೋಜಿಸಿದಲ್ಲಿ ಕಲೆಗಾರರನ್ನು ಬೆಳಕಿಗೆ ತರಬಹುದು; ಜೀವನೋತ್ಸಾಹವಿದ್ದರೆ ಏನನ್ನಾದರೂ ಸಾಧಿಸಬಹುದು, ಈ ನಿಟ್ಟಿನಲ್ಲಿ ಸಾಧಿಕ್ ಅವರ ಪ್ರಯತ್ನ ಯಶಸ್ವಿಯಾಗಲಿ ಎಂದು ಶುಭಹಾರೈಸಿದರು. ಚಿತ್ರಕಲಾವಿದ ರೂಪೇಶ್ ನಾಣಯ್ಯ ಮಾತನಾಡಿ, ನಮ್ಮದೇ ಕಲಾ ಚಿತ್ರಕಲೆಗಳನ್ನು ಇಲ್ಲಿನ ಕಲಾ ಪ್ರದರ್ಶನದಲ್ಲಿ ತಂದಿಟ್ಟ ಹಾಗೂ ಕಳೆದ ಹಲವಾರು ವರ್ಷಗಳಿಂದ ಪ್ರತಿ ವರ್ಷವೂ ಈ ಉತ್ಸವದಲ್ಲಿ ಭಾಗವಹಿಸುತ್ತಿರುವುದು ನಮ್ಮೆಗೂ ಹೆಮ್ಮೆ ತಂದಿದೆ. ಸಾಧಿಕ್ ಅವರ ಈ ಕಲಾ ಚಟುವಟಿಕೆ ಹೀಗೇಯೇ ಮುಂದೆ ಸಾಗಲಿ ಎಂದು ಶುಭ ಕೋರಿದರು.

ಕಲಾ ಉತ್ಸವಕ್ಕೆ ತಮ್ಮ ಸ್ಥಳವನ್ನು ಉದಾರವಾಗಿ ನೀಡಿರುವ ಆರ್ಜಿ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಕೆ.ಎನ್. ಉಪೇಂದ್ರ ಮಾತನಾಡಿ, ಕಲಾವಿದರನ್ನು ಒಂದೇಡೆ ಸೇರಿಸಿ ಕಲೆಗೆ ಜೀವ ತುಂಬುತ್ತಿರುವ ಈ ಶಿಬಿರದ ಆಯೋಜನೆ ಮತ್ತು ಸದುದ್ದೇಶದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಮಾಜಿಕ ಕಾರ್ಯಕರ್ತ ನಯಾಜ್ ಮಾತನಾಡಿ, ಕಲೆಗೆ ನಾವೆಲ್ಲರೂ ಪ್ರೋತ್ಸಾಹ ನೀಡಬೇಕು. ಸಾಧಿಕ್ ಅವರು ಯಾವುದೇ ಫಲಾಪೇಕ್ಷೆ ಇಲ್ಲದೆ ಕಲಾ ಸೇವೆಯಲ್ಲಿ ತೊಡಗಿರುವುದು ಮಾದರಿಯಾಗಿದೆ. ಇಂತಹ ಸುಂದರ ವಾತಾವರಣದಲ್ಲಿ ಕಲಾ ಶಿಬಿರವನ್ನು ನಿರ್ಮಿಸಿರುವುದು ನಿಜಕ್ಕೂ ಖುಷಿಯ ವಿಚಾರ ಎಂದರು.

ರೋಟರಿ ಶಾಲೆಯ ಮುಖ್ಯ ಶಿಕ್ಷಕಿ ವಿಶಾಲಾಕ್ಷಿ ಮಾತನಾಡಿ, ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇಂತಹ ವೇದಿಕೆಗಳು ಅತ್ಯಗತ್ಯ. ಪ್ರಕೃತಿಯ ನಡುವೆ ಮಕ್ಕಳಿಗೆ ಹಾಗೂ ಕಲಾಸಕ್ತರಿಗೆ ಕಲೆಯನ್ನು ಪರಿಚಯಿಸುತ್ತಿರುವ ಸಾಧಿಕ್ ಅವರ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಅಭಿಪ್ರಾಯಪಟ್ಟರು.

ಶಿಕ್ಷಕ ಸುಲೈಮಾನ್ ಮಾತನಾಡಿ, ಸಾಧಿಕ್ ಅವರ ನಿರಂತರ ಕಲಾ ಸೇವೆ ನಿಜಕ್ಕೂ ಮೆಚ್ಚತಕ್ಕದ್ದು. ಇದಕ್ಕೆ ನಾವೆಲ್ಲರೂ ಪ್ರೋತ್ಸಾಹ ನೀಡಬೇಕಿದೆ. ಕಳೆದ ಹಲವಾರು ವರ್ಷಗಳಿಂದ ನಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾ ಬಂದಿದ್ದು, ಇವರ ಕಲಾ ಸೇವೆ ಹೀಗೇಯೇ ನಿರಂತರವಾಗಿರಲಿ ಎಂದರು. ಸಾಹಿತಿ ರಜಿತಾ ಕಾರ್ಯಪ್ಪ ಮಾತನಾಡಿ, ಯಾವುದೇ ಫಲಾಪೇಕ್ಷೆ ಇಲ್ಲದೆ ಕಲಾಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ವಿಭಿನ್ನ ಜೀವನಶೈಲಿಯನ್ನು ಅಳವಡಿಸಿಕೊಂಡಿರುವ ಏಕೈಕ ವ್ಯಕ್ತಿ ಸಾಧಿಕ್. ಇವರ ಈ ಪರಿಶ್ರಮಕ್ಕೆ ಕುಟುಂಬ ವರ್ಗದವರೂ ಬೆನ್ನೆಲುಬಾಗಿ ನಿಂತಿದ್ದಾರೆ. ಚಿತ್ರಕಥೆ ಹಾಗೂ ಚಿತ್ರಗಾರನಾಗಿ ವಿವಿಧ ರಂಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಇವರು, ಕಳೆದ 10 ವರ್ಷಗಳಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುತ್ತಾ ಕಲೆಯ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಕೊಡಗಿನಲ್ಲಿ ಕಲಾ ಚಟುವಟಿಕೆಗಳು ಹಾಗೂ ಚಿತ್ರರಚನೆಗಾರರು ಕಡಿಮೆ ಇರುವ ಸನ್ನಿವೇಶದಲ್ಲಿ, ಪ್ರಕೃತಿಯ ಮಧ್ಯೆ 51 ದಿನಗಳ ಶಿಬಿರ ಆಯೋಜಿಸಿರುವುದು ಶ್ಲಾಘನೀಯ. ಜಿಲ್ಲೆಯಲ್ಲಿ ಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವಂತಾಗಬೇಕು ಎಂದರು.

ಟಿ.ಜೆ. ಕಿಶೋರ್ ಕುಮಾರ್ ಶೆಟ್ಟಿ ಮಾತನಾಡಿ, ಕಲೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಇಂತಹ ಸೃಜನಶೀಲ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿರುವುದು ನಿಜಕ್ಕೂ ಶ್ಲಾಘನೀಯ. ನನ್ನ ಹಳೆಯ ಒಡನಾಡಿ ಸಾಧಿಕ್ ಅವರಿಗೆ ಕಲೆಯ ಮೇಲಿರುವ ಗಾಢವಾದ ಒಲವು ಮತ್ತು ಸಮರ್ಪಣಾ ಭಾವವೇ ಇಂತಹ ಬೃಹತ್ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲು ಪ್ರೇರಣೆಯಾಗಿದೆ ಎಂದು ತಿಳಿಸಿದರು.

ಸಾಧಿಕ್ ಆರ್ಟ್ಸ್ ಲಿಂಕ್‌ನ ಮಾಲೀಕರು ಹಾಗೂ ಶಿಬಿರದ ಆಯೋಜಕ ಸಾಧಿಕ್ ಹಂಸಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲೆ ಮನಸ್ಸಿಗೆ ಮುದ ನೀಡುತ್ತದೆ. ನನ್ನ ಹವ್ಯಾಸ ಇಂದು ಇಷ್ಟು ದೊಡ್ಡ ವೇದಿಕೆ ಕಲ್ಪಿಸಿದೆ. ಕೊಡಗಿನಲ್ಲಿ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವಂತಾಗಬೇಕು ಎಂದರು.

51 ದಿನಗಳ ಕಲಾ ಶಿಬಿರ ಹಾಗೂ ಪ್ರದರ್ಶನ: ಪ್ರಕೃತಿಯ ಮಡಿಲಲ್ಲಿ ಆಯೋಜನೆಗೊಂಡಿರುವ ಈ ಕಲಾ ಉತ್ಸವದಲ್ಲಿ ಕೊಡಗಿನ ವಿವಿಧ ಕಲಾವಿದರ ಆಕರ್ಷಕ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಮುಂಬರುವ 51 ದಿನಗಳ ಕಾಲ ಇಲ್ಲಿ ವಿವಿಧ ರೀತಿಯ ಕಲಾ ಶಿಬಿರಗಳು ನಡೆಯಲಿದ್ದು, ಆಸಕ್ತ ವಿದ್ಯಾರ್ಥಿಗಳಿಗೆ ಚಿತ್ರಕಲೆ ಹಾಗೂ ವಿವಿಧ ಕಲಾ ಪ್ರಕಾರಗಳ ಕುರಿತು ತರಬೇತಿ ಮತ್ತು ಕಲಿಕೆಯನ್ನು ಮುಂದುವರಿಸಲಾಗುತ್ತದೆ. ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಚಿತ್ರಕಲಾವಿದರು, ಕಲಾಸಕ್ತರು, ಸಾರ್ವಜನಿಕರು ಹಾಗೂ ಕುಟುಂಬ ವರ್ಗದ ಸದಸ್ಯರು ಉಪಸ್ಥಿತರಿದ್ದರು.

ಹಾರಂಗಿ ಪ್ರದೇಶಕ್ಕೆ ಡಿ.ಸಿ. ಭೇಟಿ...



Nadubadenews;ನ.16:ಕುಶಾಲನಗರ: ತಾಲ್ಲೂಕಿನ ಹಾರಂಗಿ ಹಿನ್ನೀರು ಪ್ರದೇಶಕ್ಕೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಸೋಮವಾರ ಭೇಟಿ ನೀಡಿ ವೀಕ್ಷಿಸಿದರು.

ಹಾರಂಗಿ ಹಿನ್ನೀರು ಪ್ರದೇಶದ ಜಲಸಹಾಸ ಕ್ರೀಡೆ ಸಂದರ್ಭದಲ್ಲಿ ಬೋಟ್ ಮುಳುಗಿ ದಂಪತಿಗಳು ಮೃತಪಟ್ಟ ಹಿನ್ನೆಲೆ ಆ ಪ್ರದೇಶಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು.

ಜಲಸಾಹಸ ಕ್ರೀಡೆ ಸಂದರ್ಭದಲ್ಲಿ ದುರ್ಘಟನೆಗಳು ಸಂಭವಿಸದಂತೆ ಎಚ್ಚರ ವಹಿಸಬೇಕಿತ್ತು. ಸದ್ಯ ಹಾರಂಗಿ ಹಿನ್ನೀರಿನ ಪ್ರದೇಶದಲ್ಲಿ ಜಲಸಹಾಸ ಕ್ರೀಡೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಅವರು ಮಾಹಿತಿ ನೀಡಿದರು.

ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯ 2023 ರಿಂದ ಖಾಸಗಿ ಕಂಪೆನಿಯು ಹಾರಂಗಿ ಹಿನ್ನೀರು ಪ್ರದೇಶದಲ್ಲಿ ಜಲಸಹಾಸ ಕ್ರೀಡೆ ನಡೆಸುತ್ತಿದ್ದು, ಮೃತಪಟ್ಟ ದಂಪತಿ ಸ್ಪೀಡ್ ಬೋಟ್‌ನಲ್ಲಿ ತೆರಳುತ್ತಿದ್ದರು. ತಿರುವು ತೆಗೆದುಕೊಳ್ಳುವ ಸಂದರ್ಭದಲ್ಲಿ ನಿಯಂತ್ರಣ ತಪ್ಪಿ ಬೋಟ್ ಮಗುಚಿದೆ. ಅಷ್ಟರಲ್ಲಿ ಬೋಟ್‌ನಡಿ ಇಬ್ಬರು ಸಿಲುಕಿ ಮೃತಪಟ್ಟಿದ್ದರು ಎಂದು ಸ್ಥಳೀಯರು ಮಾಹಿತಿ ನೀಡಿದರು.

ಬಳಿಕ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ದುಬಾರೆ ರಿವರ್ ರ್ಯಾಫ್ಟಿಂಗ್ ಬಳಿ ನಿರ್ಮಾಣವಾಗಿರುವ ಹೈಟೆಕ್ ಶೌಚಾಲಯ ಮಾಹಿತಿ ಪಡೆದರು.

ನಂತರ ಬಸವನಹಳ್ಳಿ ವಸತಿ ಶಾಲೆಗೆ ಭೇಟಿ ನೀಡಿ, ಪರಿಶೀಲಿಸಿದರು. ಈ ಸಂದರ್ಭದಲ್ಲಿ ಕಾವೇರಿ ನೀರಾವರಿ ನಿಗಮದ ಎಸ್ಇ ಸತೀಶ್, ಎಇಇ ಪುಟ್ಟಸ್ವಾಮಿ, ತಹಶೀಲ್ದಾರ್ ರಮೇಶ್, ಲೋಕೋಪಯೋಗಿಯ ಕಾರ್ಯಪಾಲಕ ಎಂಜಿನಿಯರ್ ಪ್ರಭು ಇತರರು ಇದ್ದರು.

ಕೊಡವ ಮುಸ್ಲಿಮ್ ಹಿನ್ನಲೆಯ ಅಧ್ಯಯನವಾಗಲಿ; ಕೆ.ಎಂ.ಎ. ಶೈಕ್ಷಣಿಕ ಪುರಸ್ಕಾರ ಸಮಾರಂಭದಲ್ಲಿ ಗಣ್ಯರ ಅಭಿಮತ



ವರದಿ: ಕೆ. ಈಶಾನ್ವಿ

Nadubadenews;ನ.16:ವಿರಾಜಪೇಟೆ: ಕೊಡವ ಮುಸ್ಲಿಮ್ ಅಸೋಸಿಯೇಷನ್ (ಕೆ.ಎಂ.ಎ.) ವತಿಯಿಂದ ಕೊಡವ ಮುಸ್ಲಿಮ್ ಶಿಕ್ಷಣ ನಿಧಿಯ ಸಹಯೋಗದಲ್ಲಿ ನೀಡಲಾಗುವ ಈ ಸಾಲಿನ 'ಕೆ.ಎಂ.ಎ. ವಿಶೇಷ ಶೈಕ್ಷಣಿಕ ಪುರಸ್ಕಾರ-2026' ವತರಣೆ ಹಾಗೂ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭವು ವಿರಾಜಪೇಟೆಯ ಸಂತ ಅನ್ನಮ್ಮ (ಸೇಂಟ್ ಆನ್ಸ್) ಪ್ಯಾರಿಷ್ ಹಾಲ್‌ನಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಜರುಗಿತು.

ಕಾರ್ಯಕ್ರಮವನ್ನು ಬೆಂಗಳೂರಿನ ಪೊಲೀಸ್ ತರಬೇತಿ ಶಾಲೆಯ ಪೊಲೀಸ್ ಇನ್‌ಸ್ಪೆಕ್ಟರ್ ಮೀನಕೇರಿ ಎ. ಮಹಮ್ಮದ್ ಅವರು ದಫ್ ಬಾರಿಸುವ ಮೂಲಕ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ದೇಶದ ನಿಜವಾದ ಸಂಪತ್ತು ಯುದ್ಧ ಸಮೂಹವಾಗಿದ್ದು, ಪೋಷಕರು ಮಕ್ಕಳನ್ನೇ ನಿಜವಾದ ಆಸ್ತಿಯನ್ನೇ ಮಾಡಬೇಕೇ ಹೊರತು ಮಕ್ಕಳಿಗಾಗಿ ಆಸ್ತಿ ಮಾಡುವುದೇ ಮುಖ್ಯವಲ್ಲ ಎಂದರು.

ಪ್ರತಿಭೆಗಳನ್ನು ಮತ್ತು ಅವರ ಸಾಧನೆಗಳನ್ನು ಗುರುತಿಸಿ ಸನ್ಮಾನಿಸುವ ಕಾರ್ಯ ನಿಜಕ್ಕೂ ಶ್ಲಾಘನೀಯ. 'ಸಿ' ಅಂದರೆ ಚಾಯ್ಸ್ (ಆಯ್ಕೆ) ಆಗಿದ್ದು, ನಮ್ಮ ಭವಿಷ್ಯಕ್ಕೆ ನಾವೇ ರೂವಾರಿಗಳಾಗಿದ್ದೇವೆ, ಅದನ್ನು ನಾವೇ ಹಾಳು ಮಾಡಿಕೊಳ್ಳಬಾರದು. ದೇವರು ಯಾವುದೇ ಮನುಷ್ಯನ ಹಣೆಯಲ್ಲಿ ಕಳ್ಳನಾಗಲಿ ಅಥವಾ ಮಾದಕ ವ್ಯಸನಿಯಾಗಲಿ ಎಂದು ಬರೆಯುವುದಿಲ್ಲ; ನಮ್ಮ ಸೋಮಾರಿತನ ಮತ್ತು ತಪ್ಪುಗಳಿಗೆ ದೇವರನ್ನು ದೂಷಿಸುವುದು ಸರಿಯಲ್ಲ ಎಂದು ಕಟುಸತ್ಯವನ್ನು ನುಡಿದರು.

ಅಂಕಗಳೇ ವಿದ್ಯಾರ್ಥಿಗಳಿಗೆ ಸಂಪೂರ್ಣ ಮಾನದಂಡವಲ್ಲ, ಅಂಕಗಳು ಬುದ್ಧಿವಂತಿಕೆಯನ್ನು ತೋರಿಸಿದರೆ ನಡವಳಿಕೆ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ವಿದ್ಯಾರ್ಥಿಗಳ ಈ ಸಾಧನೆ ಏಕಾಂಗಿಯಲ್ಲ, ಇದರ ಹಿಂದೆ ತಂಡೆ-ತಾಯಿ ಹಾಗೂ ಶಿಕ್ಷಕರ ತ್ಯಾಗವಿದೆ. ಮಕ್ಕಳನ್ನು ಇತರರೊಂದಿಗೆ ಹೋಲಿಕೆ ಮಾಡಿ ಮೂದಲಿಸುವುದು ಅಥವಾ ನಂದಿಸುವುದು ಸರಿಯಲ್ಲ ಎಂದು ಆನೆ ಮತ್ತು ಅಳಿಲಿನ ಉದಾಹರಣೆಯೊಂದಿಗೆ ಕಿವಿಮಾತು ಹೇಳಿದರು.

ಕೊಡವ ಮನೆತನಗಳ ಕೊಡವ ಮುಸ್ಲಿಮ್ ಸಮುದಾಯವು ಕೊಡವ ಹಾಗೂ ಮುಸ್ಲಿಮರ ನಡುವೆ ಸಾಂಸ್ಕೃತಿಕ ರಾಯಭಾರಿಯಂತೆ ಕೆಲಸ ಮಾಡುತ್ತಿದ್ದು, ಸಾಮಾಜಿಕ ಸೌಹಾರ್ದತೆಯನ್ನು ಬೆಳೆಸುವ ನಿಟ್ಟಿನಲ್ಲಿ ಈ ಸಂಘಟನೆ ಶ್ರಮಿಸುತ್ತಿದೆ ಎಂದರು.

ಕೊಡವ ಮನೆ ಹೆಸರು ನಮ್ಮ ಅಸ್ತಿತ್ವವಾಗಿದ್ದು, ಇದರ ಬಗ್ಗೆ ಕೀಳರಿಮೆ ಇರದೆ ವಿಶೇಷ ಅಭಿಮಾನವಿರಬೇಕು ಹಾಗೂ ಇದರ ಕುರಿತು ಅಧ್ಯಯನ ಮತ್ತು ಸಂಶೋಧನೆಗಳು ನಡೆಯಬೇಕು, ಇದಕ್ಕೆ ಕೆ.ಎಂ.ಎ. ಸಂಪೂರ್ಣ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.

ಪೊನ್ನಂಪೇಟೆ ಕೊಡವ ಎಜ್ಯುಕೇಷನ್ ಸೊಸೈಟಿ ಅಧ್ಯಕ್ಷ ಡಾ. ಮುಕ್ಕಾಟಿರ ಸಿ. ಕಾರ್ಯಪ್ಪ ಮಾತನಾಡಿ, ತಂದೆ-ತಾಯಿಗಳು ತಮ್ಮ ಕಷ್ಟಗಳನ್ನು ಬದಿಗೊತ್ತು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ವಿದ್ಯಾರ್ಥಿಗಳು ತಮ್ಮ ಪೋಷಕರು ಯಾವ ಉದ್ದೇಶಕ್ಕಾಗಿ ನಮ್ಮನ್ನು ಓದಿಸುತ್ತಿದ್ದಾರೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಶಿಕ್ಷಣದ ನಿಜವಾದ ಅರ್ಥವನ್ನು ತಿಳಿದುಕೊಳ್ಳಬೇಕು ಎಂದರು.

ಕೇವಲ ಪಾಠಕ್ಕೆ ಸೀಮಿತವಾಗದೆ ಸಾಮಾನ್ಯ ಜಜ್ಞಾನ, ವ್ಯವಹಾರ ಜ್ಞಾನ ಹಾಗೂ ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಕಲಿಯಬೇಕು. ಮಕ್ಕಳು ತಪ್ಪು ಮಾಡಿದಾಗ ತಂದೆ-ತಾಯಿಗಳು ತಿಳಿಹೇಳುವುದನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಇಂದಿನ ಮಕ್ಕಳೇಮುಂದಿನ ಪ್ರಜೆಗಳಾಗಿರುವುದರಿಂದ ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಎಡಪಾಲಿನ ನಿವೃತ್ತ ಮುಖ್ಯೋಪಾಧ್ಯಾಯರು, ರಾಷ್ಟ್ರ ಪ್ರಶಸ್ತಿ ವಿಜೇತ ಒಕ್ಕರಿಗೆ ಜಿ. ಉಮ್ಮೈರ್ ಮಾಸ್ಟರ್ ಮಾತನಾಡಿ, ಚರಾಸ್ತಿ ಮತ್ತು ಸ್ಥಿರಾಸ್ತಿಯ ನಡುವಿನ ವ್ಯತ್ಯಾಸವನ್ನು kepada ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು. ನಾವು ಸಂಪಾದಿಸುವ ಹಣ, ಆಸ್ತಿ ಸ್ಥಿರಾಸ್ತಿಯಾದರೆ, ನಾವು ಕಲಿಯುವ ವಿದ್ಯೆ ಎಂಬುದು ನಮ್ಮ ಜೊತೆಯೇ ಬರುವ ಶಾಶ್ವತವಾದ ಚರಾಸ್ತಿಯಾಗಿದೆ. ಆಸ್ತಿಯನ್ನು ಯಾರು ಬೇಕಾದರೂ ಕಸಿದುಕೊಳ್ಳಬಹುದು, ಆದರೆ ಕಲಿತ ವಿದ್ಯೆಯನ್ನು ಯಾರಿಂದಲೂ ಕದಿಯಲು ಸಾಧ್ಯವಿಲ್ಲ ಮತ್ತು ಅದನ್ನು ಹೊತ್ತೊಯ್ಯಲು ಯಾವುದೇ ವಾಹನದ ಅಗತ್ಯವಿಲ್ಲ, ಅದು ಸದಾ ನಮ್ಮೊಂದಿಗೆ ಇರುತ್ತದೆ.

ವಿದ್ಯೆ ಗಳಿಸಲು ಛಲವಿರಬೇಕು. ಇಂದು ಲೌಕಿಕ ವಿದ್ಯೆಯ ಜೊತೆಗೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಶಿಕ್ಷಣದ ಕೊರತೆಯಿಂದ ಸಮಾಜದಲ್ಲಿ ನೀತಿ ಶಿಕ್ಷಣ ಕುಸಿಯುತ್ತಿದೆ; ಲೌಕಿಕ ಮತ್ತು ಧಾರ್ಮಿಕ ವಿದ್ಯೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದರು.

ಕನ್ನಡ ಮಾಧ್ಯಮದಲ್ಲಿ ಕಲಿಯುವುದರಲ್ಲಿ ಯಾವುದೇ ಜುಗುಪ್ಸೆ ಅಥವಾ ಕೀಳರಿಮೆ ಇರಬಾರದು, ನಮ್ಮ ನಾಡು-ನುಡಿ ಕನ್ನಡವಾಗಿದ್ದು ಅದನ್ನು ಕಲಿಯಲೇಬೇಕು ಮತ್ತು ಕನ್ನಡದ ಅಸ್ತಿತ್ವ ಎಂದೆಂದಿಗೂ ಅಳಿಯಬಾರದು. ಕವಿಮಣ್ಮರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಒಳ್ಳೆಯ ಮಾನವರಾಗಿ ಬದುಕಬೇಕು ಎಂದು ಕಿವಿಮಾತು ಹೇಳಿದರು.

ಪೊಲೀಸ್ ಇನ್‌ಸ್ಪೆಕ್ಟರ್ ಕುಪ್ಪೋಡಂಡ ಜಿ. ರಫೀಕ್ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಸ್ಪಷ